# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 714 ಗ್ರಾಪಂಕಾ 2016, ದಿನಾಂಕ 09.11.2016
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/654/2016/ಎಆರ್‌ಇ-9, ದಿನಾಂಕ 25.05.2018
3) ಸರ್ಕಾರದ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸ್, ದಿನಾಂಕ 12.06.2018
4) ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 08.07.2018.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು ಗ್ರಾಮ ಪಂಚಾಯತಿಯ ಸದಸ್ಯರು ಮತ್ತು ಅವರುಗಳ ಸಂಬಂಧಿಕರನ್ನು ವಸತಿ ಯೋಜನೆಯಡಿ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿರುವ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮ 14ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ, ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ ರವರನ್ನು ನೇಮಿಸಲಾಗಿದ್ದು, ವಿಚಾರಣಾಧಿಕಾರಿಯು ಕೆಳಕಂಡ ಆರೋಪದ ಮೇಲೆ ವಿಚಾರಣೆ ನಡೆಸಿ, ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ವರದಿ ಮಾಡಿರುತ್ತಾರೆ.

> "DGO being a PDO have selected beneficiaries who are the members and relatives of the members of Grama Panchayat, thereby you failed to maintain absolute integrity and devotion to duty and committed an act which is unbecoming of a Government Servant and thus you are guilty of misconduct under Rule3(1)(i) to (iii) of KCS (Conduct) Rules, 1966."

ಮೇಲೆ ಓದಲಾದ (3)ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4)ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ಕರ್ನಾಟಕ ನಾಗರೀಕ ಸೇವಾ ನಿಯಮಗಳು 3(1)(i)-(iii) 1996ರನ್ವಯ ನಾನು ಯಾವುದೇ ದುರ್ನಡತೆಯ ಅಪರಾಧವನ್ನು ಮಾಡಿರುವುದಿಲ್ಲವೆಂದು ಸ್ಪಷ್ಟೀಕರಿಸುತ್ತೇನೆ, ಯಾಕಂದರೆ ಕರ್ನಾಟಕ ಗ್ರಾಮ ಪಂಚಾಯತಿಗಳ ಅಧಿನಿಯಮ, 1993ರನ್ವಯ ಗ್ರಾಮ ಸಭೆಯು ಸರ್ವಾನುಮತ ಒಪ್ಪಿಗೆ ಪಂಚಾಯತಿ ಠರಾವುಗಳು ಮತ್ತು ನಡವಳಿಕೆಗಳಿಗೆ ಆಧಾರಭೂತವಾಗಿರುತ್ತದೆ. ನಾನು ಕಾರ್ಯಾಲಯದ ಭಾಗವಾಗಿ ಪಂಚಾಯತಿಯ ನೌಕರನಾಗಿದ್ದು ಕಾನೂನುಬದ್ಧ ಸಲಹೆ ಸೂಚನೆಗಳನ್ನು ಕಮಿಟಿಗೆ ನೀಡಬಹುದೇ ಹೊರತು ಅವರು ಬರೆಸುವ ನಡವಳಿ ಮತ್ತು ಸರ್ವಾನುಮತದ ಠರಾವುಗಳನ್ನು ವಿರೋಧಿಸುವುದು ನನ್ನ ಕರ್ತವ್ಯವಲ್ಲ. ಕಮಿಟಿಗೆ ಅಭಿಪ್ರಾಯಗಳನ್ನು ತಿಳಿಸಿದ ಕಾನೂನು ಪಾಲನೆಗೆ ಸಹಾಯ ಸಹಕಾರ ಕೊಡುವುದು ಮಾತ್ರ ನನ್ನ ಕರ್ತವ್ಯ ಅದನ್ನು ನಾನು ಮಾಡಿರುತ್ತೇನೆ. ಹೊರತಾಗಿ ಫಲಾನುಭವಿಗಳ ಆಯ್ಕೆಯಲ್ಲಿ ನನ್ನ ಪಾತ್ರ ಇರದೇ ಇದ್ದದ್ದು ಸ್ಪಷ್ಟವಿದೆ. ಅಷ್ಟೇ ಅಲ್ಲ .ಈವರೆಗೆ ಯಾವುದೇ ಫಲಾನುಭವಿಗಳಿಗೆ ನಿವೇಶನ ಅಥವಾ ಯಾವುದೇ ಮನೆ ಮಂಜೂರಾಗಿಲ್ಲ ಎಂಬ ಅಂಶ ಸ್ಪಷ್ಟವಿದೆ.

ಇದೇ ಆಯ್ಕೆಪಟ್ಟಿಯೇ ಸ್ಥಗಿತವಾಗಿದ್ದು ನಾನು ಅದನ್ನು ನೀಡಿ ಏನಾದರೂ ಮಾಡಲು ಸಾಧ್ಯವಿದೆಯೇ? ಎಂಬ ಅಂಶವನ್ನು ಚರ್ಚಿಸಿದ ಕಾಲಕ್ಕೆ ಪರಿಶೀಲಿಲಾಗಿಲ್ಲ. ಚುನಾಯಿತ ಪ್ರತಿನಿಧಿಗಳ ಅಧಿಕಾರವನ್ನು ನೇರವಾಗಿ ಸಕ್ರಿಯವಾಗಿ ಭಾಗವಹಿಸಿ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ನೌಕರಿಗಾಗಲೀ ಅಭಿವೃದ್ಧಿ ಅಧಿಕಾರಿಗಾಗಲೀ ಅವಕಾಶವಿರುವುದಿಲ್ಲವೆಂಬ ಅಂಶವನ್ನು ಪುನಃ ಗಮನಕ್ಕೆ ತರುತ್ತೇನೆ.

ನಾನು ದಿನಾಂಕ 28.02.2014ರಂದು ನಿವೃತ್ತಿಯಾಗಿದ್ದು, ಅದಕ್ಕೂ ಪೂರ್ವದಲ್ಲಿ ನಡೆದ ಈ ವ್ಯವಹಾರಗಳ ಬಗ್ಗೆ ನನಗೆ ನಿವೃತ್ತಿಯ ನಂತರ ವಿಚಾರಣೆಯ ನೋಟೀಸನ್ನು ನೀಡಲಾಗಿದೆ. ಕರ್ನಾಟಕ ಸಿವಿಲ್ ಸೇವಾ ನಿಯಮಗಳು 1958ರ ಕಲಂ ನಿಯಮ 214 ಉಪನಿಯಮ(2)(ಸಿ)(11) ರನ್ವಯ ನಗೆ ಈ ಬಗ್ಗೆ ಯಾವುದೇ ರೀತಿ ತಪ್ಪಿತಸ್ಥನನ್ನಾಗಿ ಆರೋಪಿಸಿ ವಿಚಾರಣೆ ನಡೆಸಲು ಅವಕಾಶವಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಆದಾಗ್ಯೂ ನನ್ನನ್ನು ಈ ಪ್ರಕರಣದಲ್ಲಿ ನೇರವಾಗಿ ತಪ್ಪತಸ್ಥನಾಗಿ ಮಾಡಿ ಶಿಕ್ಷೆಯ ಬಗ್ಗೆ ನಿರ್ಣಯಿಸಲಾಗಿದ್ದು ನನ್ನ ಅಹವಾಲನ್ನು ಪುನಃ ಪರಿಶೀಲಿಸಿ ಆದ ಅನ್ಯಾಯಕ್ಕೆ ಪರಿಯಾರ್ಚನೆಯನ್ನು ನಿರೀಕ್ಷಿಸುತ್ತೇನೆ."

ವಿಚಾರಣಾಧಿಕಾರಿಯವರು ಸಾಕ್ಷ್ಯಾಧಾರಗಳು, ಹೇಳಿಕೆಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ ಆರೋಪಗಳು ಸಾಬೀತಾಗಿರುವುದಾಗಿರುವ ಹಿನ್ನೆಲೆಯಲ್ಲಿ, ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಇವರಿಗೆ ದೊರಕುವ ಪಿಂಚಣಿಯಲ್ಲಿ ಶೇ.10ರಷ್ಟು ಮೊತ್ತವನ್ನು ಐದು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಪ್ರಮುಖ ಅಂಶಗಳು ಕೆಳಗಿನಂತಿವೆ.

6) Perused the Ex.1 & 2 complaint, Ex.P3 (37 sheets) documents, Ex.P4 report submitted by the I.O which is marked with the consent of the DGO, Ex.P5 is the comments of the DGO. Ex.D1 letter dated 28/2/2018 of the present PDO, Gram panchayat, Rainala. Ex.D2 copy of the resolution dated 23/4/12 of Rainala Gram panchayat and Gram Sabha dated 23/2/2013, Ex.D3&4 copy of the Proceedings of Gram Sabha dated 25/1/2012. The above said documents reveal that the DGO was working as a PDO in the Rainala Gram panchayat on the date of 25/1/12. As per the Ex.D3 &4 she was the part of the proceedings of the said gram sabha dated 25/1/2012 and also general body of the gram panchayat dated 23/4/12 (Ex.D2), Dw.1-DGO not disputed the Ex.P4 report submitted by the I.O which documents marked with her consent. In the said report para No.5 stated as follows;

"ಸದರಿ ಆಯ್ಕೆ ಪಟ್ಟಿಯಲ್ಲಿ ರಾಯನಾಳ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಯಲ್ಲಪ್ಪ ಬಿನ್ ಕರೆಪ್ಪ ಜವಳಗೇರಿ ಇವರ ಸಂಬಂಧಿಕರಾದ ಆಯ್ಕೆ ಪಟ್ಟಿಯಲ್ಲಿಯ ಅ.ನಂ.22, 23, 24, 30, 31, 48 ಹಾಗೂ ಉಪಾಧ್ಯಕ್ಷರಾದ ಶ್ರೀ ಶಿವಲಿಂಗಪ್ಪ ತಂದೆ ದ್ಯಾಮಪ್ಪ ಯರಗೇರಿ ಇವರ ಸಂಬಂಧಿಕರಾದ ಆಯ್ಕೆ ಪಟ್ಟಿಯ ಅ.ನಂ.3, 7, 29, 46, 63 ಹಾಗೂ ಸದಸ್ಯರಾದ ಶ್ರೀಮತಿ ಸಾವಕ್ಕ ಬಸಪ್ಪ ಹರಿಜನ ಇವರ ಸಂಬಂಧಿಕರಾದ ಶ್ರೀ ಗದಿಗೆಪ್ಪ ನಿಂಗಪ್ಪ ಗುಂಜಳ ಇವರ ತಾಯಿಯವರಾದ ಆಯ್ಕೆ ಪಟ್ಟಿಯಲ್ಲಿಯ ಅ.ನಂ.53 ಹಾಗೂ ಸದಸ್ಯರಾದ ಶ್ರೀಮತಿ ಗದಿಗೆವ್ವ ಮಲ್ಲಪ್ಪ ಬಣಜಿಗೇರ ಇವರ ತಮ್ಮ ಹೆಸರಿನಲ್ಲಿ ಆಯ್ಕೆ ಪಟ್ಟಿಯಲ್ಲಿಯ ಅ.ನಂ.55 ಹಾಗೂ ಸದಸ್ಯರಾದ ಶ್ರೀ ಸೋಮಣ್ಣ ಮಲ್ಲಪ್ಪ ಸವಾಸೆ ಇವರ ಸೊಸೆಯವರಾದ ಆಯ್ಕೆ ಪಟ್ಟಿಯಲ್ಲಿಯ ಅ.ನಂ.51 ಹಾಗೂ ಸದಸ್ಯರಾದ ಶ್ರೀಮತಿ ದೇವಕ್ಕ ರಮೇಶ ಬಡಿಗೇರ ಇವರ ತಮ್ಮ ಹೆಸರಿನಲ್ಲಿ ಆಯ್ಕೆ ಪಟ್ಟಿಯಲ್ಲಿ ಅ.ನಂ.60 ಹಾಗೂ ಸದಸ್ಯರಾದ ಶ್ರೀಮತಿ ಮುತ್ತವ್ವ ಮಡಿವಾಳಪ್ಪ ಅಂಗಡಿ ಇವರ ಸೊಸೆಯವರಾದ ಆಯ್ಕೆ ಪಟ್ಟಿಯಲ್ಲಿಯ ಅ.ನಂ.58 ಹಾಗೂ ಸದಸ್ಯರಾದ ಶ್ರೀ ಮಂಜುನಾಥ ಬಸಪ್ಪ ಹರಿಜನ ಇವರ ಸಂಬಂಧಿಕರಾದ ಆಯ್ಕೆ ಪಟ್ಟಿಯಲ್ಲಿಯ ಅ.ನಂ.57ನೇದ್ದರಲ್ಲಿ ಇದ್ದು

ಮೇಲ್ನೋಟಕ್ಕೆ ಆಯ್ಕೆ ಪಟ್ಟಿಯ ಮೇಲೆ ನಮೂದಿಸಿದ ಆಯ್ಕೆಯಾದ ಫಲಾನುಭವಿಗಳು ರಾಯನಾಳ ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರ ಸಂಬಂಧಿದರಿದ್ದುದು ಕಂಡುಬರುತ್ತದೆ ಆದರೂ ಅವರು ನಿಯಮಾನುಸಾರ ಅರ್ಹ ಫಲಾನುಭವಿಗಳೇ ಇರುತ್ತದೆ.

ಆಯ್ಕೆ ಪಟ್ಟಿಯಲ್ಲಿಯ ಈ ಕೆಳಗೆ ನಮೂದಿಸಿದ 1) ಅಕ್ಕಮಹಾದೇವಿ ಗುರುಸಿದ್ದಯ್ಯ ಹಿರೇಮಠ, 2) ಲಕ್ಷ್ಮೀ ಮಾರುತಿ ಹಿತ್ತಲಮನಿ, 3) ಶ್ಯಾಸಾಜ ಅಕಬರ ಮುಲ್ಲಾ 4) ಪಾರವ್ವ ಪರಶುರಾಮ ಚಳವಟ್ಟಿ, 5)ಸಾವಿತ್ರಿ ಶಿವಪುತ್ರ ಹರಿಜನ ಇವರುಗಳು ಸದರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ಮನೆ ಇದ್ದವರು ಹಾಗೂ ಕೆ.ಎಸ್.ಆರ್.ಟಿ.ಸಿ ನೌಕರರು ಇದ್ದದ್ದು ಕಂಡುಬರುತ್ತದೆ.

ಆಯ್ಕೆ ಸಮಿತಿಯು ಸರಕಾರದ ಮಾರ್ಗಸೂಚಿಯಂತೆಯೆ ನಿಯಮಾನುಸಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಪಟ್ಟಿ ತಯಾರಿಸಿದ್ದು ಕಂಡುಬಂದಿರುತ್ತದೆ. ಆದ್ದರಿಂದ ಅರ್ಜಿಯಲ್ಲಿ ನಮುದು ಇರುವಂತೆ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಫಲಾನುಭವಿಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರ ಸಂಬಂಧಿಕರಿದ್ದರೂ ಸಹ ಅವರೂ ಕೂಡಾ ನಿಯಮಾನುಸಾರ ಅರ್ಹ ಫಲಾನುಭವಿಗಳೇ ಇರುತ್ತಾರೆ. ಆದ್ದರಿಂದ ಅರ್ಜಿಯಲ್ಲಿ ನಮೂದು ಇರುವ ಆರೋಪದಂತೆ ಆಯ್ಕೆ ಪಟ್ಟಿಯಲ್ಲಿ ಅವ್ಯವಹಾರ ಎಸಗಿರುವುದು ಕಂಡುಬಂದಿರುವುದಿಲ್ಲಾ."

.beneficiaries as per the guidelines issued by the Rajeev Gandhi Vasati Nigama Niyamita dated 21/6/2010. The DGO has not produced documents before this enquiry authority to show that the above said beneficiaries are the residents of the said gram panchayat and they are comes under the below poverty line and not getting any government benefits under any government housing scheme from any department. Even though the authority of the selection of beneficiaries under the housing scheme is vested with the gram sabha in the presence of the public, the DGO was the part of the said gram sabha. Further the duty of the DGO is scrutinizing the documents after selected the beneficiaries in the gram sabha before placing the same at general body of the said gram panchayat for approval and forward the same to the taluk panchayat. But, in this case the DGO as a PDO of the said gram panchayat has not scrutinized the documents of the selected beneficiaries whether they are eligible or not as per the guidelines issued by the Rajeev Gandhi Vasati Nigama Niyamita. The above said Act of the DGO itself shows that she has committed dereliction of duty. The said list was canceled after filed the objection by one Mahadevappa Belagali. This fact also admitted by the DGO. The above said facts and materials and evidence of the Pw.1 and Dw.1 clearly reveals that the DGO has not scrutinizing the documents before placing the beneficiaries list at general body of the gram panchayat and forward the same to taluk panchayat to confirm whether the above said five members are eligible for getting the benefits under the said housing scheme or not. Further reveals that the DGO without scrutinizing the

documents of the selected beneficiaries in gram sabha, same list of selected beneficiaries placed before the general body of the gram panchayat and forward the same to the taluk panchayat for approval which list include the members and relatives of the members of gram panchayat, Rainala, who are not eligible to select as a beneficiaries under the above said scheme. There is no sufficient and clear evidence from the side of the DGO to show that aforesaid beneficiaries are eligible for getting the benefits under the aforesaid scheme. Thereby the disciplinary authority has succeeded to prove the charge leveled against the DGO.

8) In the event of the above circumstances, the charge leveled against the DGO is proved. Hence, this report is submitted to Hon'ble Upalokayukta-1 for further action.

ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು ದಿನಾಂಕ 28.02.2014ರಂದು ನಿವೃತ್ತಿ ಹೊಂದಿದ್ದು, ಇವರಿಗೆ ದೊರಕುವ ಪಿಂಚಣಿಯಲ್ಲಿ ಶೇ.10ರಷ್ಟು ಮೊತ್ತವನ್ನು ಐದು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಇವರಿಗೆ ದೊರಕುವ ಪಿಂಚಣಿಯಲ್ಲಿ ಶೇ.10ರಷ್ಟು ಮೊತ್ತವನ್ನು ಐದು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 714 ಗ್ರಾಪಂಕಾ 2016(ಭಾಗ-1), ಬೆಂಗಳೂರು, ದಿನಾಂಕ: 12.10.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರಿಗೆ ದೊರಕುವ ಪಿಂಚಣಿಯಲ್ಲಿ ಶೇ.10ರಷ್ಟು ಮೊತ್ತವನ್ನು ಐದು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/10/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಧಾರವಾಡ ಜಿಲ್ಲಾ ಪಂಚಾಯತಿ, ಧಾರವಾಡ.
6) ಕಾರ್ಯನಿರ್ವಾಹಕ ಅಧಿಕಾರಿ, ಹುಬ್ಬಳ್ಳಿ ತಾಲ್ಲೂಕು ಪಂಚಾಯತಿ, ಧಾರವಾಡ.
(ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀಮತಿ ಎ.ವಿ.ಸುಂಕದ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ರಾಯನಾಳ ಗ್ರಾಮ ಪಂಚಾಯತಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.